SATYAVADI Founded 1917 Regd. No. M. 1299

# ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟದ್ದು)

ಸಂಪುಟ 29 ಸಂಚಿಕೆ 118 | ಗುರುವಾರ 3—1—46 | ಬಿಡಿ ಪ್ರತಿ 3 ಪೈ

## ಸಂಸ್ಥಾನ ಪ್ರಜೆಗಳಿಗೆ ಜವಾಬ್ದಾರಿ ಸರ್ಕಾರ ಬೇಕು

ನಿನ್ನೆಯ ದಿವಸ ಬೆಂಗಳೂರಿನಲ್ಲಿ ಆರಂಭವಾದ ಇಂಡಿಯನ್ ಸೈನ್ಸ್ ಕಾಂಗ್ರೆಸಿಗೆ ಶ್ರೇಯಸ್ಸನ್ನು ಕೋರಿ ಸಂದೇಶವನ್ನು ಪ್ರಭುಗಳು ಕಳುಹಿಸಿರುವರು.

ಲೆವಾಲಿಟ್ ಬಗ್ಗೆ ಬ್ರಿಟನ್ ಮತ್ತು ಫ್ರಾನ್ಸಿನ ಒಪ್ಪಂದನನ್ನು ಪ್ರತಿಭಟಿಸುವ ಸಲುವಾಗಿ ಸಿರಿಯಾ, ಲೆಬ್ನಾನ್‌ಗಳಲ್ಲಿ ಸಾಮಾನ್ಯಕ ಮುಷ್ಕರವಾಚರಿಸಬೇಕೆಂದು ಸಿರಿಯಾ ಮಂತ್ರಿಯವರು ಸೂಚನೆಯಿತ್ತಿದ್ದಾರೆ.

ಶನಿವಾರದಿಂದ ಬೊಂಬಾಯಿನಲ್ಲಿ ನಡೆಯುತ್ತಿದ್ದ ಡಾಕ್ ಮುಷ್ಕರ ನಿನ್ನೆಗೆ ಮುಕ್ತಾಯವಾಯಿತು.

ಚಿತ್ರದುರ್ಗದಲ್ಲಿ ಇದೇ ತಿಂಗಳಿಂದ ರೇಷನ್ನನ್ನು ಮುಕ್ಕಾಲು ಭಾಗ ಕೊಡಲಾಗುವುದು.

ಗಲ್ಲಿಗೇರಿಸಲ್ಪಟ್ಟ ಜಾನ್ ಎಮೆರಿಯ ತಾಯಿ ಫ್ಲಾರೆನ್ಸಳು ಭಾರ ರಾಜದ್ರೋಹ ತಕ್ಸೀರುದಾರರಿಗೆ ಇನ್ನು ಮುಂದೆ ಸಾಕಷ್ಟು ಶಿಕ್ಷೆಯನ್ನು ಕೊಡದಿರಲೆಂದು ವಿನಂತಿ ಮಾಡಿಕೊಂಡಿರುವಳು.

ಅರೂವರೆ ಕೋಟಿ ಬಂಗಾಳಿಗಳು ಪ್ರಾರ್ಥನಾ ಕಾಲದಲ್ಲಿಂ ವಂತೆ ಶಾಂತತೆಯಿಂದ ಜೀವಿಸುತ್ತಾ ಅವಂಗೆ ಕೊಟ್ಟ ಸೂಚನೆಗಳನ್ನು ಅನುಸರಿಸುತ್ತಾ ಹೋದರೆ ಅವರ ಹೃದಯವನ್ನು ಸಾವಿರ ಹಿಟ್ಲರರುಗಳೆಲ್ಲಲು ಅದಕೂ ಅವರ ಸ್ವಾತಂತ್ರ್ಯವನ್ನು ಯಾರೂ ಕಿತ್ತುಕೊಳ್ಳಲಾರರು ಎಂಬುದಾಗಿ ಮೊನ್ನೆ ಪ್ರಾರ್ಥನಾ ಕಾಲದಲ್ಲಿ ಕಾಂಟಾಯಿನಲ್ಲಿ ಮಾಡಿದ ಭಾಷಣದಲ್ಲಿ ಗಾಂಧೀಜಿ ತಿಳಿಸಿದರು.

ಆಜಾದ್‌ನಗರ (ಉದಯಪುರ) ಮುಂದಿನ ಯಾವ ರಾಜ್ಯಾಂಗ ರಚನೆ ಸಂಸ್ಥೆಯಲ್ಲಿಯು ಸಂಸ್ಥಾನದ ಪ್ರಜೆಗಳಿಗೂ ಪ್ರಜಾಪ್ರಭುತ್ವ ರೀತಿಯ ಪೂರ್ಣ ಪ್ರಾತಿನಿಧ್ಯವಿರಬೇಕೆಂದೂ ಆ ನಿಯಮದ ಮೇಲೆ ರಾಜರು ಮತ್ತು ಸಂಸ್ಥಾನದ ಸದಕಾರಗಳೊಡನೆ ಸಮ್ಮೇಳನ ಸಂತೋಷದಿಂದ ಸಹವರ್ತಿಸುವುದೆಂಬ ನಿರ್ಣಯವು 8 ನೆ ಸಂಸ್ಥಾನ ಪ್ರಜಾಪರಿಷತ್ತಿನಲ್ಲಿ ಮಂಜೂರಾಯಿತು.

o o

ಬೊಂಬಾಯಿ, ಜ 1 — ಗಾಂಧೀಜಿರವರು ಇದೇ 23 ರಲ್ಲಿ ಸುದ್ದಾಸಿಗೆ ಬರಿದು 24 ರಲ್ಲಿ ನಡೆವ ಹಿಂದೀ ಪ್ರಚಾರ ಸಭೆ ರಜತೋತ್ಸವದಲ್ಲಿ ಅಧ್ಯಕ್ಷತೆ ವಹಿಸುವರು.

## ಇವನು ಹಿಟ್ಲರ್ ಮಗನೆ

ನ್ಯೂಲೆಂಬರ್ಗ್ ಜ 1 — ಬೊಹಿಮಿಯಾದಲ್ಲಿ ಜುಗೋಸ್ಲೋವಿಯಾದ ಪೋಲೀಸಿನವರು 12 ವರ್ಷದ ಒಬ್ಬ ಹುಡುಗನನ್ನು ದಸ್ತಗಿರಿ ಮಾಡಿದ್ದಾರೆ. ಇವನು ಹಿಟ್ಲರಿನ ಮಗನಿರಬಹುದೆಂದು ಹೇಳಲಾಗಿದೆ. ಅಮೇರಿಕನ್ನರಿಗೆ ದೊರೆತಿರುವ ಹಿಟ್ಲರಿನ ಉಯಿಲಿನಲ್ಲಿ ಕಂಡುಬಂದ ಫೋಟೋದಂತೆ ಈ ಹುಡುಗನಿರುವನೆಂದೂ, ಇವನಲ್ಲಿ ಪೋರ್ಜರಿ ಕಾಗದ ಪತ್ರಗಳಿದ್ದು. ಫ್ರೆಡ್ರಿಕ್ ಸುಲಟ್ಸ್ ಎಂಬ ಹೆಸರಿಟ್ಟುಕೊಂಡಿರುವನೆಂದೂ, ಸೋಡಲು ಹಿಟ್ಲರಿನಂತಿರುವನೆಂದೂ, ಬರ್ಲಿನ್ನಿನಿಂದ ಬೊಹಿಮಿಯಾಕ್ಕೆ 2 ತಿಂಗಳ ಹಿಂದೆ ಹೋದನೆಂದೂ ಹೇಳಲಾಗಿದೆ.

(2)

### ಮೈಸೂರು ಸಿಟಿ ಮುನಿಸಿಪಾಲಿಟಿ

ಮೈಸೂರು ತಾ || 27-12-45

## ಹರಾಜು ನೋಟೀಸು.

ಮೈಸೂರು ಸಿಟಿ ಚಾಮರಾಜ ಮೊಹಲ್ಲಾ ಕೃಷ್ಣರಾಜವನಂನಲ್ಲಿ ಮೈಸೂರು ಸಿಟಿ ಮುನಿಸಿಪಾಲಿಟಿಯವರು ಕಟ್ಟಿಸಿರುವ 'ಮಾಡಲ್ ಹೌಸಸ್' 8 ಮನೆಗಳು ಪಬ್ಲಿಕ್ಕಾಗಿ **6-1-46** ನೇ ತಾರೀಖು ದಿವಿ 10 ಘಂಟೆಗೆ ಸದರಿ ಮನೆಗಳ ಬಳಿ ಹರಾಜು ಮಾಡಲ್ಪಡುತ್ತವೆ. ಇಷ್ಟವುಳ್ಳವರು ಖುದ್ದು ಹಾಜರಾಗಿ ಹರಾಜಿನಲ್ಲಿ ಸವಾಲ್ ಮಾಡಿ ಸದರೀ ಮನೆಗಳನ್ನು ಪಡೆಯಬಹುದು. ಹೆಚ್ಚಿಗೆ ವಿಚಾರಗಳನ್ನು ಮುನಿಸಿಪಲ್ ಆಫೀಸಿಗೆ ಬಂದು ತಿಳಿದುಕೊಳ್ಳಬಹುದು.

(ಸಹಿ) ಆರ್. ಎಲ್. ರಾಜು
ಮುನಿಸಿಪಲ್ ಎಂಜಿನಿಯರ್

## ರಾಜಧಾನಿಯಲ್ಲಿ ಸಿಡುಬಿನ ಉಪದ್ರವವಿಲ್ಲ

### ಸಕ್ಕರೆ

ಮೈಸೂರು, ಜ 3 — ನಗರದ ಪ್ರತಿಯೊಂದು ರೇಷನ್ ಡಿಪೋವಿಗೂ ಸಾಕಷ್ಟು ಸಕ್ಕರೆಯು ನಿನ್ನೆಯ ದಿವಸವೆ ಧ್ಯಾಹ್ನ ಸರಬರಾಜಾಗಿರುವುದಾಗಿ ನವ್ ರೇಷನ್ ಬಾತ್ಮಿದಾರರು ತಿಳಿಸುತ್ತಾರೆ.

### ಪತ್ರಿಕೋದ್ಯೋಗಿ ಸಂಘ

ಮೈಸೂರು, ಜ 3 — ಈ ದಿವಸ ಬೆಳಿಗ್ಗೆ ಮೈಸೂರು ಪತ್ರಿಕೋದ್ಯೋಗಿ ಸಂಘದ ಸಾಧಾರಣ ಸಭೆಯು ಶ್ರೀ ರಂಗಯ್ಯನವರ ಅಧ್ಯಕ್ಷತೆಯಲ್ಲಿ ಸೇರಿದ್ದಿತು. ಸಂಘದ ಸಂಬಂಧವಾಗಿ ಚರ್ಚೆ ನಡೆಯಿತು.

### ಉಪಹಾರ ಸಮಾರಂಭ

ಮೈಸೂರು, ಜ 2 — ಸ್ಥಳೀಯ ನಗರಸಭೆಯ ಉಪಾಧ್ಯಕ್ಷರಾದ ಶ್ರೀ ವೆಂಕಟರಮಣಯ್ಯನವರು (ಈ ದಿವಸದಿಂದ ಅಧಿಕಾರವಿಶ್ರಾಂತರಾಗುವರು) ನಿನ್ನೆ ಸಂಜೆ ಪೌರಸಭೆಯ ಕಟ್ಟಡದಲ್ಲಿ ಪೌರಸಭೆಯ ಸದಸ್ಯರುಗಳಿಗು ಮತ್ತು ಪೌರಸಭೆಯ ನೌಕರ ವರ್ಗಕ್ಕೂ ಉಪಹಾರ ಸಮಾರಂಭವನ್ನೇರ್ಪಡಿಸಿದ್ದರು. ಉಪಹಾರವಾದನಂತರ ಪೌರಸಭಾಧ್ಯಕ್ಷರಾದ ಶ್ರೀ ರಾಮಚಂದ್ರರಾವ್ ಬಾಂಭೋರೆಯವರು ಮತ್ತು ಪೌರಸಭೆಯ ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀ ನಾರಾಯಣ ಸ್ವಾಮಿಯವರು ಶ್ರೀ ವೆಂಕಟರಮಣಯ್ಯನವರ ಸೇವಾ ಪ್ರಶಂಸನೆಯನ್ನು ಮಾಡಿದರು. ಶ್ರೀ ವೆಂಕಟರಮಣಯ್ಯನವರು ಸೂಕ್ತವಾದ ಭಾಷಣವನ್ನು ಮಾಡಿದನಂತರ ಸಮಾರಂಭವು ಮುಕ್ತಾಯವಾಯಿತು.

### ಆರೋಗ್ಯಾಧಿಕಾರಿಗಳೊಡನೆ ನಮ್ಮ ಪ್ರತಿನಿಧಿಯ ಭೇಟಿ

ಮೈಸೂರು, ಜ 3 — ನಗರದಲ್ಲಿ ಸಿಡುಬು ಉಪದ್ರವ ತಲೆದೋರಿರುವುದಾಗಿ ನಮ್ಮ ಪ್ರತಿನಿಧಿಗೆ ತಿಳಿದುಬಂದಿತು. ಈ ಬಗ್ಗೆ ಸರಿಯಾದ ವಿವರಗಳನ್ನು ಪಡೆಯಲು ಪೌರಸಭೆಯ ಆರೋಗ್ಯಾಧಿಕಾರಿಗಳನು ನಮ್ಮ ಪ್ರತಿನಿಧಿಯು ಭೇಟಿ ನೂಡಿದಾಗ 'ಕಳೆದ ಮಾಹೆ ತಾ || 22 ರಿಂದ 29 ರವರೆವಿಗೆ ಮೈಸೂರಿನಲ್ಲಿ ನಾಲ್ಕು ಮಂದಿಗೆ ಮಾತ್ರ ಸಿಡುಬು ತಗುಲಿತ್ತು. ಈ ನಾಲ್ಕು ಮಂದಿಯಲ್ಲಿ ಚಾಮರಾಜ ಮೊಹಲ್ಲದವರೊಬ್ಬರು ಮತ್ತು ಮಂಡಿ ಮೊಹಲದವರೊಬ್ಬರು. ಉಳಿದೀರ್ವರಲ್ಲಿ ಒಬ್ಬರು ಮಂಗಳೂರಿನ ಕಡೆಯವರು; ಕಾಯಿಲೆಯೊಡನೆ ಅವರು ಮೈಸೂರಿಗೆ ಬಂದಿರುವರು. ಮತ್ತೊಬ್ಬನು ಬೀದಿಯ ನಿರ್ಗತಿಕನು. ಈ ಮೊಹಲ್ಲ ಸುತ್ತುವುತ್ತಲುಗಳಲ್ಲಿ ಕಳೆದ ಮಾಹೆ ತಾ || 1 ರಿಂದ 31 ರವರೆವಿಗೆ 720 ಮಂದಿಗೆ ದೇವಿ ಹಾಕಲಾಗಿದೆ' ಎಂಬುದಾಗಿ ತಿಳಿಸಿದರು.

### ಕಾಲ ಬದಲಾವಣೆ

ಮೈಸೂರು, ಜ 3 — ನಾಳೆಯ ದಿವಸದಿಂದ ಎಮರ್ಜನ್ಸಿ ರೇಷನ್ ಡಿಪೋಗಳು ಮಧ್ಯಾಹ್ನ 11 ಘಂಟೆಯಿಂದ ಸಾಯಂಕಾಲ 6 ಘಂಟೆಯವರೆಗೆ ಕೆಲಸ ಮಾಡುತ್ತಿದೆ.

### ಸತ್ಕಾರ ಕೂಟ

ಮೈಸೂರು, ಜ 3 — ನಾಳೆಯ ದಿವಸ ಸಾಯಂಕಾಲ ಪೌರಸಭೆಯು ಕಟ್ಟಡದಲ್ಲಿ ನಿವೃತ್ತ ಮತ್ತು ನೂತನ ಉಪಾಧ್ಯಕ್ಷರುಗಳ ಗೌರವಾರ್ಥವಾಗಿ ಪೌರಸಭಾ ನೌಕರರು ಸತ್ಕಾರಕೂಟವನ್ನೇರ್ಪಡಿಸಿರುವುದಾಗಿ ತಿಳಿದುಬಂದಿದೆ

(1) ಯುದ್ಧ ಕೈದಿಗಳ ಪುನರುತ್ಥಾನ ಯೋಜನೆ.

(2) ಸೇನಿಕ ಕಾಲೇಜಿನಲ್ಲಿ ಶಿಕ್ಷಣಕ್ಕಾಗಿ ಸೇರಿದ ಪ್ರಥಮ ಮಹಿಳೆ.


## AT Opera — 2 ನೇ ವಾರ

ತ್ಯಾಗರಾಜ ಭಾಗವತರ್ — ನಾಗಯ್ಯ — ಕನ್ನಾಂಬಾ

ಚಿತ್ರಪಡಿಸಿರುವ

## ಅಶೋಕ ಕುಮಾರ (ತಮಿಳು)

**L. N. Press**
Sriramp et MYSORE
For Good Printing


Edited, Printed and published by M. S. Krishna Rao, at the Satvavadi Press, Chamaraja Agrahar, Mysore


## At Ranjit

ಪೃಥ್ವಿರಾಜ್, ಪದ್ಮಿನಿ, ಮೋನಿಕಾ, ದೇಶಾಯಿ, ಮುಂತಾದವರು ನಟಿಸಿರುವ

— ಗೌರಿ —

(ಹಿಂದಿ)

27-12-45 ರಿಂದ ಪ್ರತಿದಿನ 3 ಆಟ 3-30, 6-30 ಮತ್ತು 9-45 ಕ್ಕೆ

ಹಸಕ್ ಬಿಟ್ಟದಪುರದ ಹೊಗೆಸೊಪ್ಪಿನಿಂದ ತಯಾರಾದ

— ಉಂಡೇ ನಶ್ಯ —

ಇಲ್ಲಿ ದೊರೆಯುತ್ತೆ

**ರಾವಂದೂರ್ ವೀರಶೆಟ್ಟಿ & ಸನ್ಸ್**

ಶಿವರಾಂಪೇಟೆ ಮೈಸೂರು.


## ಸತ್ಯವಾದಿ

**ದಿನ ಪತ್ರಿಕೆ**

ಸ್ಥಳದಲ್ಲಿ — ತಿಂಗಳಿಗೆ 6 ಆಣೆ

ಸತ್ಯವಾದಿ ಸೋಮವಾರದ ಸಂಚಿಕೆಗೆ ಎಲ್ಲಾ ಊರುಗಳಲ್ಲೂ ಏಜಂಟರು ಬೇಕಾಗಿದ್ದಾರೆ. ವಿಷಯಗಳಿಗೆ ಬರೆಯಿರಿ. ಅಂಚೆ ವೆಚ್ಚ ಸೇರಿ ಪರಸ್ಥಳಕ್ಕೆ 1-12-0

ಮ್ಯಾನೇಜರ್, ಸತ್ಯವಾದಿ, ಚಾಮರಾಜಪುರಂ, ಮೈಸೂರು

## ಅಕ್ಕರ

ಸಾಮಾಜಿಕ

ಭಾವಪರಿಪೂರ್ಣವಾದ ಕಥೆ ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವವರೆಗೂ ಊಟಕ್ಕೆ ಕೂಡ ಏಳಲು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ, ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು.

ದೊರೆಯುವ ಸ್ಥಳ—

ಸತ್ಯವಾದಿ ಆಫೀಸ್, ಮೈಸೂರು

### ಸ್ಥಾನ ಗೆದ್ದ ಶ್ವಾನ

ಬ್ರಿಟಿಷ್ ಮುನಿಸಿಪಲ್ ಚುನಾವಣೆಯೊಂದರಲ್ಲಿ, ಒಂದು ಸ್ಥಾನ ಗೆದ್ದ ಕೀರ್ತಿಯು ಶ್ವಾನಕ್ಕೆ ಬಂತು. ಆ ನಾಯಿಯ ಯಜಮಾನನು ಕುಂಡ; ಲೇಬರ್ ಪಕ್ಷೀಯನು. ಚುನಾವಣೆಯು ಎರಡು ವಾರಗಳ ಮೊದಲಿಂದ, ಆತನು ಬಾಗಲಿಂದ ಬಾಗಲಿಗೆ ಓಟು ಕೇಳಿ ಹೋಗಬೇಕಾಯಿತು. ಈ ಕಾರ್ಯದಲ್ಲಿ ಅನನ ನಾಯಿಯೇ ಅವನಿಗೆ ಸಹಾಯಕವಾಯಿತು. ಡಬ್ಲ್ಯೂ. ಎಲ್. ವಿಲ್ಸ್ (ಕುರುಡನ ಹೆಸರು) 2846 ಲೇಬರ್ ಓಟುಗಳನ್ನೂ ಪಡೆದು ಗೆದ್ದನು. ಅವನ ಎದುರಾಳಿ ವಿಲಸ್ಟನ್ನಿಗೆ 700 ಕಡಿಮೆ!.

### ಕರುಣೆಯ ಶಿಕ್ಷೆ

ಇಂಡೋನೇಸ್ಯಾ ಕ್ರಾಂತಿಯಲ್ಲಿ ಜನರ ಸರಕನ್ನು ಲೂಟಾಯಿಸುವವರಿಗೆ, ಅಧಿಕಾರಿಗಳು ಒಂದು ವಿಚಿತ್ರ ಶಿಕ್ಷೆ ಕೊಟ್ಟ ಕಥೆ ಪ್ರಕಟವಾಗಿದೆ. ಒಂದು ಭಂಡಸಾಲೆಯಿಂದ ಕೆಲವರು ಸಕ್ಕರೆ ಗೋಣಿಗಳನ್ನೊಯ್ಯುತ್ತಿರುವುದನ್ನು ಕಂಡು, ಬಲತ್ಕಾರದಿಂದ ಅವರಿಗೆ ಸಕ್ಕರೆ ತಿನ್ನಿಸಿ ನೀರು ಕುಡಿಸಿದರು. ಹೊಟ್ಟೆಯುಬ್ಬಿ ವಾಂತಿಯಾಗುವ ತನಕ ತಿನ್ನಿಸಿ ಕುಡಿಸಿದರು. 'ಇನ್ನವರು ಸಕ್ಕರೆಗಾಗಿ ಆಸೆ ಮಾಡುವಂತಿಲ್ಲ' ಎಂದು ಅಧಿಕಾರಿಗಳ ಹೇಳಿಕೆ.

---

ಪಾರ್ಲಿಮೆಂಟ್ ಮೆಂಬರರಿಗೆ, ಅಹ್ವಾನ ಕ್ಷೇತ್ರಗಳಿಂದ ಪಾರ್ಲಿಮೆಂಟಿಗೆ ಬರಲಿಕ್ಕೂ ಹೋಗಲೂ ವಿಮಾನ ಅಥವಾ ರೈಲ್ವೆಯಲ್ಲಿ, ಧರ್ಮಾರ್ಥ ಪ್ರಯಾಣವನ್ನು ಸ್ವೀಕರಿಸಲಾಗಿದೆ.

### ಚಿನ್ನಾ ಬೆಳ್ಳಿ ಧಾರಣೆ

| | |
|---|---|
| ಸವರನ್ 1 ಕ್ಕೆ | ರೂ. 57-8-0 |
| ಚಿನ್ನ ತೊಲ 1 ಕ್ಕೆ | 82-0-0 |
| ಬೆಳ್ಳಿ | 1-6-0 |


## ರಕ್ತವರ್ಧಿಗೆ - ಧಾತುಪುಷ್ಟಿಗೆ ಸಂಜೀವನ

# ಶಕ್ತಿ ಸುಧಾ

ಬೆಲೆ ಪಚ್ಚಿ ೧ ಕ್ಕೆ ಒಂದು ರೂಪಾಯಿ

ವಿಳಾಸ— ಶಕ್ತಿಸುಧಾ, ೧೦೬೭ ಚಾಮರಾಜಪುರಂ, ಮೈಸೂರು